ಬೆಳಗ್ಗೆ ಇನ್ನೂ ಇನ್‌ಸ್ಟಿಟ್ಯೂಟ್‌ನ ಬಾಗಿಲನ್ನು ಪ್ರವೇಶಿಸಿರಲಿಲ್ಲ. ರೀ... ರೀ... ಸಹಪಾಠಿಯ ಧ್ವನಿ ಕೇಳಿಸಿತು. ಸೌಜನ್ಯಕ್ಕಾಗಿ ನಿಂತೆ. ಅವಳು ಸಮೀಪ ಬರುತ್ತಲೇ, "ಎಷ್ಟು ಬೇಗ ಬಂದು ಬಿಟ್ರಿ... ಇಗೋ ನಿಮ್ಮ ಪುಸ್ತಕಗಳು, ಪ್ಯಾಕೆಟ್ ಅದಲು ಬದಲು ಆಗಿದ್ದವು...'' ಅವಳೇ ಮೊದಲು ಹೇಳಿದಳು.

"ಹೌದು...'' ಎಂದು ಆಕೆಯ ಪುಸ್ತಕದ ಗಂಟನ್ನು ಕೊಟ್ಟೆ.

ಅಧ್ಯಾಪಕರ ಭೆಟ್ಟಿಗೆಂದು ಅವರ ಕೋಣೆಗೆ ಹೋದೆವು. ಪಾಠಗಳ ಅಭ್ಯಾಸ, ಟಿಪ್ಪಣಿ ಮುಂತಾದವುಗಳ ಬಗ್ಗೆ ಸರ್ ದೀರ್ಘವಾಗಿ ಮಾತನಾಡಿದರು, ಅವರ ದೀರ್ಘ ಚರ್ಚೆಯ ನಂತರ ನಮ್ಮ ಅಧ್ಯಾಪಕರು ನಮ್ಮನ್ನು ಬೀಳ್ಕೊಟ್ಟರು.

ಹೊರಗೆ ಬಂದಮೇಲೆ ನಾನು, "ಆಯಿತು... ನಾನು ಸ್ವಲ್ಪ ಲೈಬ್ರರಿಗೆ ಹೋಗಿ ಬರುತ್ತೇನೆ...'' ಎಂದಾಗ ಅವಳು ನಾನೂ ಬರುತ್ತೇನೆ ಎಂದು ನನ್ನ ಜೊತೆಗೇ ಬಂದಳು. ಬಂದು ನನ್ನ ಎದುರಿನ ಮೇಜಿನ ಮುಂದೆ ಕುಳಿತು ಪುಸ್ತಕ ಓದತೊಡಗಿದಳು. ನಾನು ಸ್ವಲ್ಪ ಹೊತ್ತು ನೋಟ್ಸ್ ಬರೆದುಕೊಂಡು, "ಹೊರಡೋಣ" ಎಂದೆ. ಇಬ್ಬರೂ ಎದ್ದು ಬಂದೆವು.

ಲೈಬ್ರರಿಯಿಂದ ಬಂದ ಬಳಿಕ ನಾನು ಅವಳನ್ನು ಬಸ್ಸು ಹತ್ತಿಸಿ ರೂಮಿಗೆ ತೆರಳಿದೆ. ಮರುದಿನದ ಪಾಠಗಳನ್ನು ಓದತೊಡಗಿದೆ. ಮನಸ್ಸು ಅವಳನ್ನು ನೆನಪಿಸಿತು. ಎಷ್ಟು ಫ್ರೀಯಾಗಿದ್ದಾಳೆ. ಈಕೆ ವಿವಾಹಿತಳೆ?... ಈಕೆ ಯಾರು? ಕೇಳೋಣ ಎಂದುಕೊಂಡೆ. ಆದರೆ ಪಾಪ ಏನೆಂದುಕೊಳ್ಳಬಹುದು ಎಂದು ಸುಮ್ಮನಾದೆ. ನಾಳಿನ ಕ್ಲಾಸು ಪಾಠಗಳ ಚರ್ಚೆ, ಅಧ್ಯಾಪಕರೊಂದಿಗಿನ ಮಾತು, ಈಕೆಯೊಂದಿಗಿನ ಚರ್ಚೆ, ಓಡಾಟ, ಕ್ಯಾಂಪಸ್ಸು, ಓದಿನ ಬೆನ್ನು ಹತ್ತಿದ ಹುಡುಗ ಹುಡುಗಿಯರ ಚಿಕ್ಕಚಿಕ್ಕ ಗುಂಪು, ಲೈಬ್ರರಿ ಎಲ್ಲವೂ ನನ್ನ ಓದಿನ ದಿನಗಳನ್ನು ನೆನಪಿಸುತ್ತಿದ್ದವು. ಅಂದಹಾಗೆ ನಾಡಿದ್ದು ರಜೆ ಎಂದು ಘೋಷಿಸಲಾಗಿತ್ತು. ನಮ್ಮ ಸಂಪರ್ಕ ಸಪ್ತಾಹದ ಕೊನೆಯ ದಿನವೇ ರಜೆ. ಮನೆಗೆ ಹೋಗುವ ಹಂಬಲವಾಯಿತು.

ಅಂದು ಕ್ಲಾಸಿನ ಕೊನೆಯ ದಿನವಾಗಿತ್ತು. ಬಹಳ ವಿದ್ಯಾರ್ಥಿಗಳು ಬಂದಿದ್ದರು. ಅವಳು ನನ್ನ ಡೆಸ್ಕಿನ ಒಂದು ಮೂಲೆಯಲ್ಲಿ ಕುಳಿತು ಸರ್ ಮಾತು ಕೇಳುತ್ತ ನನ್ನೆಡೆ ನೋಡುತ್ತಿದ್ದಳು. ಸರ್ ಅವರ ದೀರ್ಘ ಭಾಷಣ ಹಾಗೂ ಪಾಠಗಳ ವಿವರಣೆಯ ನಂತರ ದೊಡ್ಡ ಚಪ್ಪಾಳೆಯೊಂದಿಗೆ ಕೊನೆಯ ಕ್ಲಾಸ್ ಮುಗಿಯಿತು. ಕ್ಲಾಸ್ ಮುಗಿಯುತ್ತಲೇ ಸಹಪಾಠಿ ಡೆಸ್ಕನ್ನು ದಾಟಿ ನನ್ನ ಬಳಿಗೆ ಬಂದು, "ನಡೆಯಿರಿ, ಕ್ಯಾಂಟೀನಿಗೆ ಹೋಗೋಣ, ಬೆಳಗ್ಗೆ ಏನೂ ತಿಂದಿಲ್ಲ...'' ಎಂದಳು. ಕ್ಯಾಂಟೀನಿನ ಒಂದು ಬದಿಗೆ ಕುಳಿತು ನಾವಿಬ್ಬರು ದೋಸೆ ಸವಿಯುತ್ತಿರುವಾಗ,

"ನಾಳೆ ಏನ್ ಮಾಡ್ತಿರೀ... ನಾಳೆ ರಜೆ ಆಗಿ ಬಿಟ್ಟಿದೆ..." ಎಂದಳು.

"ಹೌದು... ಏನ್ ಮಾಡೋದು, ನಾಳೆ ನಮ್ಮೂರಿಗೆ ಹೋಗಬೇಕು.''

"ನಾಳೆ ಒಂದು ದಿನ ಇದ್ದು ಅರಮನೆ, ಚಾಮುಂಡಿ ಬೆಟ್ಟ ನೋಡಿ ಹೋಗೋಣಲ್ಲ? ಪ್ಲೀಸ್... '' ಮಾತಿನಲ್ಲಿ ಸಂಕೋಚದ ವಿನಂತಿ ಇತ್ತು.

ಆಕೆ ಈ ಸಾರಿ ಪೂರ್ತಿಯಾಗಿ ನನ್ನ ಕಡೆಗೆ ನೋಡಿದಳು. ನನಗೆ ಆಶ್ಚರ್ಯವಾಯಿತು. ಎಷ್ಟು ಫ್ರೀಯಾಗಿದ್ದಾಳೆ. ನಾವಿಬ್ಬರೂ ಈ ಕ್ಷಣದವರೆಗೂ ಅಪರಿಚಿತರು. ಪರಿಚಿತರಂತೆ ಊರು ಸುತ್ತಾಡುವುದು ಅಂದರೆ ಹೇಗೆ? ನನ್ನಷ್ಟಕ್ಕೆ ನಾನೇ ನೂರಾರು ಪ್ರಶ್ನೆಗಳನ್ನ ಕೇಳಿಕೊಳ್ಳತೊಡಗಿದೆ. ಆ ಕ್ಷಣವೇ ಎಚ್ಚತ್ತವನಂತೆ,

"ನನಗೆ ನಾಳೆ ಹೋಗಲೇಬೇಕು, ಬಹಳ ಕೆಲಸವಿದೆ...'' ಅಸಮಾಧಾನದಿಂದ ಹೇಳಿದೆ.

"ಅಂಥದ್ದೇನು ಕೆಲಸಬಿಡಿ, ಹೇಗಾದರೂ ಕ್ಲಾಸ್ ಇತ್ತು, ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ಅದನ್ನೇ ನಾವು ಇದಕ್ಕಾಗಿ ಉಪಯೋಗಿಸೋಣವಲ್ಲವೇ?'' ಎಂದು ಕೇಳಿದಳು.